2 ವಿಷಯ: ಆಳಂದ ತಾಲ್ಲೂಕಿನಲ್ಲಿ ಮೇ ತಿಂಗಳಲ್ಲಿ ಬೀಸಿದ ಬಿರುಗಾಳಿಯಿಂದ ತೋಟಗಾರಿಕೆ ಬೆಳೆಗಳು ಹಾಳಾಗಿದ್ದು, ರೈತರಿಗೆ ಪರಿಹಾರ ನೀಡುವ ಬಗ್ಗೆ.

ಶ್ರೀ ಬಿ.ಆರ್.ಪಾಟೀಲ್ (ಆಳಂದ): ಮಾನ್ಯ ಅಧ್ಯಕ್ಷರೆ, ಮೇ ತಿಂಗಳಲ್ಲಿ 15, 16, 17 ಸುಮಾರಿಗೆ ಭಯಾನಕ ಬಿರುಗಾಳಿ ಬಂದು ಅನೇಕ ತೋಟ ಗಾರಿಕೆ ಬೆಳೆಗಳು ಹಾಳಾಗಿದೆ. ತಾವು ಇದಕ್ಕಿಂತ ಮುಂಚೆ ಆದಂತಹ ಬೆಳೆ ಹಾನಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪರಿಹಾರ ಕೊಟ್ಟಿದ್ದೀರಿ. ಆದರೆ ಈ ಬೆಳೆ ಹಾನಿಯನ್ನು ನೀವು ಕನ್ಸಿಡರ್ ಮಾಡಿಲ್ಲ. ದಯಮಾಡಿ ತಾವು ಇದನ್ನು ಸರ್ವೇ ಮಾಡಿಸಿ ಎಷ್ಟು ಹಾನಿಯಾಗಿದೆ ಎಂದು ನೋಡಿ ರೈತರಿಗೆ ಪರಿಹಾರ ಕೊಡುವುದಕ್ಕೆ ಸರ್ಕಾರ ಮುಂದಾಗಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅವರು ಎತ್ತಿರತಕ್ಕಂತಹ ಪ್ರಶ್ನೆಯನ್ನು ಸರ್ಕಾರ ಪರಿಶೀಲಿಸುತ್ತದೆ. ಮತ್ತು ಸಮಗ್ರವಾದ ಉತ್ತರವನ್ನು ಕೂಡ ನಾನು ಕೊಡಿಸುತ್ತೇನೆ.

ಶ್ರೀ ಬಿ.ಆರ್.ಪಾಟೀಲ್: ಉತ್ತರ ಅಲ್ಲ ಪರಿಹಾರ ಕೊಟ್ಟರೆ ಸಾಕು.

ಶ್ರೀ ಟಿ.ಬಿ.ಜಯಚಂದ್ರ: ಉತ್ತರ ಮುಖೇನ ಪರಿಹಾರ ಏನು ಎತ್ತ ಎಂದು ಹೇಳುತ್ತಾರೆ. ಬಿರುಗಾಳಿ ಬಂದಿರತಕ್ಕಂತಹ ಪ್ರದೇಶ ಪ್ರಕೃತಿ ವಿಕೋಪ ನಿಧಿಯ ವ್ಯಾಪ್ತಿಯಲ್ಲಿ ಬರುತ್ತದೆಯೇ ಎಂದು ನೋಡಬೇಕಾಗುತ್ತದೆ.

ಶ್ರೀ ಬಿ.ಆರ್.ಪಾಟೀಲ್: ತಾವು ಒಂದು ಸರ್ವೇ ಮಾಡಿಸಿ. ಅದನ್ನು ಯಾರೂ ಗಮನಕ್ಕೂ ತೆಗೆದುಕೊಂಡಿಲ್ಲ.

ಅಧ್ಯಕ್ಷರು: ಆಯಿತು ಹೇಳುತ್ತಾರೆ ಬಿಡಿ.

ಶ್ರೀ ಟಿ.ಬಿ.ಜಯಚಂದ್ರ: ಪರಿಶೀಲನೆ ಮಾಡಿಸಿ ಖಂಡಿತ ಉತ್ತರ ಕೊಡಿಸುತ್ತೇವೆ.

ಶ್ರೀ ಬಿ.ಆರ್. ಪಾಟೀಲ್: ದಯಮಾಡಿ ಸರ್ವೆ ಮಾಡಿ ವರದಿ ತರಿಸಿಕೊಳ್ಳಿ.

ಅಧ್ಯಕ್ಷರು : ಬಿ ಆರ್. ಪಾಟೀಲರೇ, ಒಂದು ಊರಿನಲ್ಲಿ ಮಳೆಯಿಂದ, ಗಾಳಿಯಿಂದ ಫಸಲು ಹಾಳಾಗಿದ್ದರೆ ಸ್ಥಳೀಯ ತಹಶೀಲ್ದಾರ್ ಇದನ್ನು ನೋಡಿ ಎಸ್ಟಿಮೇಟ್ ಮಾಡುವುದಿಲ್ಲವಾ? ಯಾರು ಹೇಳಿದ್ದು ಇದು?

ಶ್ರೀ ಬಿ.ಆರ್.ಪಾಟೀಲ್: ಕೆಲವು ಕಡೆ ಮಾತ್ರ ಹೀಗೆ ಆಗಿದೆ. ನಾನು KDP meeting ಕರೆದಾಗ ಅವನು ಟೆಂಪರರಿ ತಹಶೀಲ್ದಾರ್ ಇದ್ದ.

ಅಧ್ಯಕ್ಷರು: ನೀವು ಶಾಸಕರಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ: ಪರಿಹಾರ ಕೊಡಬೇಕು ಬೇಡ ಎಂಬ ಬಗ್ಗೆ ಪ್ರಕೃತಿ ವಿಕೋಪ ನಿಧಿ ಅಡಿಯಲ್ಲಿ ಬರುತ್ತದೆ ಅಥವಾ ಇಲ್ಲ ಎಂಬ ಬಗ್ಗೆ ವಿಚಾರ ಮಾಡಿ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು: ಅದರ ಸ್ಕೇಲ್ ಇರುತ್ತದೆ ಅದರ ಪ್ರಕಾರ ಕೊಡುತ್ತಾರೆ. ತಹಶೀಲ್ದಾರ್ ಮಾಡುವಂತಹ ಮೊದಲನೇ ಪ್ರಾಥಮಿಕ ಕರ್ತವ್ಯ ಅದು.

ಶ್ರೀ ಬಿ.ಆರ್.ಪಾಟೀಲ್: ತಹಶೀಲ್ದಾರ್ ಹತ್ತಿರ ಇತಿಮಿತಿ ಇರುವುದು ಬಹಳ ಕಡಿಮೆ. ಅವರು ಲೇಟಾಗಿ ವರದಿ ಕಳುಹಿಸುತ್ತಾರೆ.

ಅಧ್ಯಕ್ಷರು: ಅವರು ಸರ್ವೇ ಮಾಡಿ, ಪರಿಶೀಲನೆ ಮಾಡಿ, ಮಾಡುತ್ತಾರೆ. ಸರ್ವೇಸಾಧಾರಣವಾದ ಕೆಲಸ ಅದು. ಅದಾದರೆ ಕೊಡುವುದು ಬಿಡುವುದು ಸರ್ಕಾರಕ್ಕೆ ಬಿಟ್ಟುದ್ದು.

ಮಾನ್ಯ ಚಿಮ್ಮನಕಟ್ಟಿ ಇಲ್ಲ, ಸುಧಾಕರಲಾಲ್.

3. ವಿಷಯ : ತುಮಕೂರು ತಾಲ್ಲೂಕು ಅಜ್ಜಗೊಂಡನಹಳ್ಳಿ ಘನತ್ಯಾಜ್ಯ ವಿಲೇವಾರಿ ಘಟಕ ವಿರೋಧಿಸಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಬಗ್ಗೆ.

ಶ್ರೀ ಪಿ.ಆರ್.ಸುಧಾಕರಲಾಲ್ (ಕೊರಟಗೆರೆ): ಮಾನ್ಯ ಅಧ್ಯಕ್ಷರೆ, ತ್ಯಾಜ್ಯ ವಿಲೇವಾರಿ ಘಟಕವನ್ನು ಅಜ್ಜಗೊಂಡನಹಳ್ಳಿಯಲ್ಲಿ ಹಾಕುವುದಕ್ಕೆ ತುಮಕೂರಿನ ಮಹಾನಗರ ಪಾಲಿಕೆ ಮತ್ತು ಜಿಲ್ಲಾಡಳಿತ ಏನು ಕ್ರಮವನ್ನು ತೆಗೆದುಕೊಳ್ಳುತ್ತಿದೆ